ಇಲಾಖೆ / ವಿಷಯ : DEPARTMENT / SUBJECT [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 14/02/2020

# ಕ್ರಿಮಿನಲ್ ರಾಜಕಾರಣ ತಡೆಗೆ ಗಂಭೀರ ಪ್ರಯತ್ನ

ನಮ್ಮ ದೇಶದಲ್ಲಿ ರಾಜಕಾರಣಕ್ಕೂ ಅಪರಾಧ ಲೋಕಕ್ಕೂ ಹತ್ತಿರದ ನಂಟಿದೆ.
ರಾಜಕೀಯದಲ್ಲಿ ಕ್ರಿಮಿನಲ್‌ಗಳ ಪಾತ್ರವೂ ಸಾಕಷ್ಟಿದೆ. ಇದು ಪ್ರಜಾಪ್ರಭುತ್ವಕ್ಕೆ
ಧಕ್ಕೆ ಉಂಟುಮಾಡುವ ರೀತಿಯಲ್ಲಿ ಗಂಭೀರ ಸ್ವರೂಪ ತಾಳಿದಾಗ ಕೆಲ ವರ್ಷಗಳಿಂದ
ನ್ಯಾಯಾಂಗವು ಚುನಾವಣೆಗೆ ಸ್ಪರ್ಧಿಸುವ ಅಪರಾಧ ಹಿನ್ನೆಲೆಯ ವ್ಯಕ್ತಿಗಳಿಗೆ ಕಡಿವಾಣ
ಹಾಕಲು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೂ ಶಾಸನಸಭೆಗಳಿಗೆ ಆಯ್ಕೆಯಾ
ಗುವ ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಈ ಹಿನ್ನೆಲೆ
ಯಲ್ಲಿ ಸುಪ್ರೀಂಕೋರ್ಟ್ ಇದೀಗ ಹೊಸತೊಂದು ಆದೇಶ ಹೊರಡಿಸಿದ್ದು, ಅದು
ರಾಜಕೀಯ ಪಕ್ಷಗಳು ಅಪರಾಧ ಹಿನ್ನೆಲೆಯ ವ್ಯಕ್ತಿಗಳಿಗೆ ಚುನಾವಣೆಗೆ ಸ್ಪರ್ಧಿಸಲು
ಟಿಕೆಟ್ ನೀಡುವುದಕ್ಕೇ ಕಡಿವಾಣ ಹಾಕುವುದು ಅನಿವಾರ್ಯ ಎನ್ನುವಂತಹ ಸನ್ನಿವೇಶ
ವನ್ನು ಸೃಷ್ಟಿಸುವ ಸಾಧ್ಯತೆಯಿದೆ. ಚುನಾವಣೆಗೆ ಸ್ಪರ್ಧಿಸುವ ವ್ಯಕ್ತಿಯ ವಿರುದ್ಧ ಕ್ರಿಮಿನಲ್
ಪ್ರಕರಣಗಳು ಬಾಕಿಯಿದ್ದರೆ ಅವುಗಳನ್ನು ರಾಜಕೀಯ ಪಕ್ಷಗಳು ತಮ್ಮ ವೆಬ್‌ಸೈಟಿನಲ್ಲಿ
ಪ್ರಕಟಿಸಬೇಕು, ಆತ ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಯಾಗಿದ್ದರೂ ಟಿಕೆಟ್ ನೀಡಿದ್ದೇಕೆ
ಎಂಬುದಕ್ಕೆ ರಾಜಕೀಯ ಪಕ್ಷಗಳು ಸಮರ್ಥನೆ ನೀಡಬೇಕು, ಗೆಲುವನ್ನು ಮಾನ
ದಂಡವಾಗಿರಿಸಿಕೊಂಡು ಟಿಕೆಟ್ ನೀಡಿದ್ದೇವೆ ಎಂದು ಸಮರ್ಥನೆ ನೀಡುವಂತಿಲ್ಲ, ಕ್ರಿಮಿ
ನಲ್ ಹಿನ್ನೆಲೆಯ ವ್ಯಕ್ತಿಗೆ ಟಿಕೆಟ್ ನೀಡಿದ್ದರೆ ಅದರ ವಿವರವನ್ನು ಫೇಸ್‌ಬುಕ್, ಟ್ವೀಟರ್
ನಲ್ಲಿ ಹಾಗೂ ಪತ್ರಿಕೆಗಳಲ್ಲಿ ಜಾಹೀರಾತು ಮೂಲಕ ಪ್ರಚುರಪಡಿಸಬೇಕು ಎಂದು
ಸುಪ್ರೀಂಕೋರ್ಟ್ ಆದೇಶಿಸಿದೆ. ಈ ಹಿಂದೆ, ಅಪರಾಧ ಹಿನ್ನೆಲೆಯ ವ್ಯಕ್ತಿಗಳು ಚುನಾ
ವಣೆಗೆ ಸ್ಪರ್ಧಿಸಿದರೆ ತಮ್ಮ ವಿರುದ್ಧವಿರುವ ಪ್ರಕರಣಗಳ ವಿವರವನ್ನು ಅಫಿಡವಿಟ್ ಮೂಲಕ ಚುನಾವಣಾ ಆಯೋಗಕ್ಕೆ ಸಲ್ಲಿಸುವುದು ಹಾಗೂ ಅದರ ಬಗ್ಗೆ ಪತ್ರಿಕೆಯಲ್ಲಿ ಜಾಹೀರಾತು ನೀಡುವುದು ಕಡ್ಡಾಯವಾಗಿತ್ತು. ಆದರೆ, ಚುನಾವಣಾ ಆಯೋಗಕ್ಕೆ ಅವರು ನೀಡುವ ವಿವರ ಜನಸಾಮಾನ್ಯರಿಗೆ ತಲುಪುತ್ತಿರಲಿಲ್ಲ. - ಇನ್ನು, ಜಾಹೀರಾತು ನೀಡಬೇಕೆಂಬ ನಿಯಮ ಸರಿಯಾಗಿ ಪಾಲನೆಯಾಗುತ್ತಿರಲಿಲ್ಲ.

**ಅಪರಾಧದ ಹಿನ್ನೆಲೆಯವರಿಗೆ ಟಿಕೆಟ್ ನೀಡಿದ್ದೇಕೆ ಎಂದು ರಾಜಕೀಯ ಪಕ್ಷಗಳು ಕಾರಣ ಕೊಡಬೇಕು ಎಂಬುದೂ ಸೇರಿದಂತೆ ಸುಪ್ರೀಂಕೋರ್ಟ್ ಕೆಲ ಕಠಿಣ ನಿರ್ಬಂಧಗಳನ್ನು ವಿಧಿಸಿದೆ.**

ಸದ್ಯ ರಾಜಕಾರಣದಲ್ಲಿ ಕ್ರಿಮಿನಲ್ ಹಿನ್ನೆಲೆಯಿರುವ ಜನಪ್ರತಿನಿಧಿಗಳ ಆಟಾಟೋಪ ಎಷ್ಟಿದೆಯೆಂದರೆ, ಸಂಸತ್ತಿನ ಶೇ.43ರಷ್ಟು ಸದಸ್ಯರ ವಿರುದ್ಧ ಕ್ರಿಮಿನಲ್ ಕೇಸುಗಳಿವೆ. ಜನಸಾಮಾನ್ಯರ ಪಕ್ಷ ಎನ್ನಲಾದ ಹಾಗೂ ದೆಹಲಿಯಲ್ಲಿ ಮೊನ್ನೆಯಷ್ಟೇ ಪ್ರಚಂಡ ಬಹುಮತದಿಂದ
ಗೆದ್ದ ಆಮ್ ಆದ್ಮಿ ಪಕ್ಷದ 62 ಶಾಸಕರ ಪೈಕಿ 43 ಶಾಸಕರ ವಿರುದ್ಧ ಕ್ರಿಮಿನಲ್
ಕೇಸುಗಳಿವೆ! ರಾಜಕಾರಣಿಗಳು ಹೋರಾಟದಿಂದ ಬಂದವರಾಗಿರುತ್ತಾರೆ, ಹೀಗಾಗಿ
ರಸ್ತೆ ತಡೆ, ರೈಲು ತಡೆ ಇತ್ಯಾದಿ ಪ್ರತಿಭಟನೆಗಳ ವೇಳೆ ಅವರ ವಿರುದ್ಧ ಕೇಸು
ದಾಖಲಾಗುವುದು ಮಾಮೂಲು ಎಂದು ಕೆಲವರು ಸಮರ್ಥಿಸಿಕೊಳ್ಳುತ್ತಾರೆ. ಆದರೆ,
ಕ್ರಿಮಿನಲ್ ಹಿನ್ನೆಲೆಯ 43 ಆಪ್ ಶಾಸಕರ ಪೈಕಿ 37 ಜನರ ವಿರುದ್ಧ ಕೊಲೆ, ಸುಲಿಗೆ,
ಅತ್ಯಾಚಾರದಂತಹ ಗಂಭೀರ ಆರೋಪಗಳಿವೆ ಎಂದು ಸಮೀಕ್ಷೆಯೊಂದು ಹೇಳಿದೆ.

ನಮ್ಮ ದೇಶದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಹಾಲಿ ಅಪರಾಧಿ ಚುನಾವಣೆಗೆ
ಸ್ಪರ್ಧಿಸುವಂತಿಲ್ಲ. 2 ವರ್ಷಕ್ಕಿಂತ ಹೆಚ್ಚಿನ ಜೈಲುಶಿಕ್ಷೆಗೊಳಗಾದ ವ್ಯಕ್ತಿ ಮುಂದಿನ ಆರು
ವರ್ಷ ಸ್ಪರ್ಧಿಸುವಂತಿಲ್ಲ. ಇನ್ನು, ಹಾಲಿ ಜನಪ್ರತಿನಿಧಿಯೊಬ್ಬ 2 ವರ್ಷಕ್ಕಿಂತ ಹೆಚ್ಚಿನ
ಜೈಲುಶಿಕ್ಷೆಗೆ ಗುರಿಯಾದರೆ ತಕ್ಷಣ ಶಾಸನಸಭೆಯ ಸದಸ್ಯತ್ವ ಕಳೆದುಕೊಳ್ಳುತ್ತಾನೆ ಮತ್ತು
ಮುಂದಿನ ಆರು ವರ್ಷ ಆತ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ, ವಿಚಾರಣಾಧೀನ
ಕೈದಿಗಳು, ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಿದವರು ಚುನಾವಣೆಗೆ ಸ್ಪರ್ಧಿಸಬಹುದು.
ನಮ್ಮ ನ್ಯಾಯಾಂಗ ವ್ಯವಸ್ಥೆಯು ವಿಳಂಬಕ್ಕೆ ಹೆಸರುವಾಸಿಯಾಗಿರುವುದರಿಂದ ಈ
ಅವಕಾಶವೇ ದುರ್ಬಳಕೆಯಾಗುತ್ತಿದೆ. ಹೀಗಾಗಿ ಜೈಲಿನಲ್ಲಿರುವವರೂ ಚುನಾವಣೆಗೆ
ಸ್ಪರ್ಧಿಸಿ ಗೆಲ್ಲಬಹುದು ಎಂಬ ವಾತಾವರಣವಿದೆ. ಚುನಾವಣಾ ವ್ಯವಸ್ಥೆಯಲ್ಲಿ ಹಣಬಲ
ಹಾಗೂ ತೋಳ್ಬಲ ಕಡಿಮೆಯಾಗದಿದ್ದರೆ ಸರ್ಕಾರದಲ್ಲಿ ಭ್ರಷ್ಟಾಚಾರ ಮತ್ತು
ಸ್ವಜನಪಕ್ಷಪಾತವನ್ನು ತಡೆಯುವುದು ಅಸಾಧ್ಯ. ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತಗಳು
ಪ್ರಜಾಪ್ರಭುತ್ವಕ್ಕೆ ದೊಡ್ಡ ಶತ್ರುಗಳು. ಹೀಗಾಗಿ ನ್ಯಾಯಾಂಗವು ಕ್ರಿಮಿನಲ್ ಹಿನ್ನೆಲೆಯ
ವ್ಯಕ್ತಿಗಳನ್ನು ಚುನಾವಣೆಯಿಂದ ದೂರವಿಡುವುದಕ್ಕೆ ಹಂತ ಹಂತವಾಗಿ ಗಂಭೀರ
ಪ್ರಯತ್ನ ಮಾಡುತ್ತಿದೆ. ಈಗಿನದು ಅಂತಹ ಇನ್ನೊಂದು ಪ್ರಮುಖ ಪ್ರಯತ್ನ.
ರಾಜಕೀಯ ಪಕ್ಷಗಳು ಸಹಕರಿಸಿದರೆ ಕ್ರಿಮಿನಲ್‌ಗಳನ್ನು ರಾಜಕೀಯದಿಂದ
ದೂರವಿಡುವುದು ಅಸಾಧ್ಯವೇನಲ್ಲ. ಆದರೆ, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?